GOVERNMENT OF KARNATAKA
OFFICE OF THE CHIEF EXECUTIVE OFFICER
ZILLA PANCHAYAT , BELGAUM-590001

Telephone 0831-2407201
0831-2407208,2407214
Fax 0831-2429662
e-mail caozpbgm@gmail.com

ಕ್ರಸಂ/ಜಿಪಂಬೆ/ಲೆಶಾ/NRDWP/ವಿನಿ-4/ವಿವ-101/2013-14 ದಿನಾಂಕ:20-08-2013.

## ಅಧಿಕೃತ ಜ್ಞಾಪನ

ವಿಷಯ: NRDWP ಅಡಿ RTGS ಮೂಲಕ ಬಿಲ್ಲಗಳನ್ನು ಪಾವತಿಸುವ ಕುರಿತು.

ಉಲ್ಲೇಖ: ಸರ್ಕಾರದ ಅಧಿಕೃತ ಜ್ಞಾಪನ ಸಂ: ಗ್ರಾಅಪ/116/ಗ್ರಾನೀಸ(2)12 ದಿ: 21-10-2013.

***

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯ [NRDWP] ವಿವಿಧ ಘಟಕಗಳಡಿ ಕಾಮಗಾರಿವಾರು ಗುತ್ತಿಗೆದಾರರ ಬಿಲ್ಲುಗಳನ್ನು ಪಾವತಿಸಲು ಪಂ.ರಾ.ಇಂ.ವಿಭಾಗ ಬೆಳಗಾವಿ ಮತ್ತು ಚಿಕ್ಕೋಡಿ ಎರಡು ವಿಭಾಗಗಳವರು RTGS Payment Authorisation ಗಳನ್ನು ಮೇಲುರುಜುವಿಗೆ ಈ ಕಾರ್ಯಾಲಯಕ್ಕೆ ಸಲ್ಲಿಸುತ್ತಿದ್ದು, ಸದರಿ Bank Adviceಗಳನ್ನು ಜಿಲ್ಲಾ ಪಂಚಾಯತ ಲೆಕ್ಕ ಶಾಖೆಯಿಂದ ನಿಗದಿತ ಅವಧಿಯಲ್ಲಿ ಲಭ್ಯವಿರುವ ಅನುದಾನ, ಶಾಸನಬದ್ಧ ಕಟಾವಣೆಗಳನ್ನು ಮಾಡಿ ಬಿಲ್ಲಗಳನ್ನು Paid & Cancelled ಮಾಡಿರುವುದನ್ನು ಪರಿಶೀಲಿಸಿ ಮೇಲುರುಜು ಮಾಡಿ ಅದೇ ದಿನ ತಪ್ಪಿದಲ್ಲಿ ಮರುದಿನ ಹಿಂದಿರುಗಿಸಲಾಗುತ್ತಿದೆ.

RTGS Payment Authorisation Bank Adviceಗಳನ್ನು ಈ ಕಛೇರಿಯಿಂದ ಮೇಲುರುಜು ಮಾಡಿಕೊಟ್ಟ ನಂತರವೂ ಸಹಿಯಾದ Bank Adviceನ್ನು ಬ್ಯಾಂಕಿಗೆ ಸಲ್ಲಿಸದೆ ಇರುವುದು ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಇನ್ನು ಮುಂದೆ ಮೇಲುರುಜು ಮಾಡಿದ Bank Adviceಗಳನ್ನು ತಕ್ಷಣ ಮುಂದಿನ ಕ್ರಮಕ್ಕಾಗಿ ಬ್ಯಾಂಕಿಗೆ ಸಲ್ಲಿಸುವುದು.ವಿಭಾಗ ಕಛೇರಿಗಳವರು ದಿನಕ್ಕೆ ಹಲವಾರು RTGSಗಳನ್ನು ಸಲ್ಲಿಸುತ್ತಿರುವುದನ್ನು ಗಮನಿಸಿದ್ದು, ವಿಳಂಭ ತಪ್ಪಿಸಲು ಒಂದೊಂದಾಗಿ ಸಲ್ಲಿಸದೇ ಒಂದು ದಿನಕ್ಕೆ ಒಟ್ಟಾಗಿ ಕ್ರೋಢೀಕೃತ ಒಂದು RTGSನ್ನು ಸಲ್ಲಿಸಲು ತಿಳಿಸಲಾಗಿದೆ. ಅಲ್ಲದೇ ಅದನ್ನು ಜಿ.ಪಂ.ನಿಂದ ಮೇಲುರುಜುವಾದ ದಿನದಂದೇ Web-site[http://zpbelgaum.kar.nic.in/kan/]ನಲ್ಲಿ Upload ಮಾಡಲಾಗುವುದು.

ತಮ್ಮ ವಿಶ್ವಾಸಿ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ.

ಇವರಿಗೆ,

1) ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜನಿಯರಿಂಗ್ ವಿಭಾಗ, ಬೆಳಗಾವಿ.
2) ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜನಿಯರಿಂಗ್ ವಿಭಾಗ, ಚಿಕ್ಕೋಡಿ.